**ಒ.ಎಸ್.ನಂಬ್ರ: 390/2018 ಪಿ.ಡಬ್ಲ್ಯೂ : 1**

ದಿನಾಂಕ: 14-03-2022

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

ಪಾಟಿ ಸವಾಲು: ಶ್ರೀ ಎಂ.ಜೆ.ಎಸ್ ವಕೀಲರಿಂದ

ಈ ದಾವೆಯನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. 50 ಸೆಂಟ್ಸು ವಿಸ್ತೀರ್ಣದ ಸ್ಥಳಕ್ಕೆ ನಾನು ಈ ದಾವೆಯನ್ನು ಮಾಡಿರುತ್ತೇನೆ. ನನ್ನ ಪ್ರಕಾರ ಈ ದಾವೆಯನ್ನು ಸಲ್ಲಿಸುವಾಗ ದಾವಾ ಆಸ್ತಿಯ ಪಹಣಿ ಪತ್ರಿಕೆಯು ನನ್ನ ತಾಯಿ ಚಂದು ಹಾಂಡ್ತಿಯ ಹೆಸರಿನಲ್ಲಿತ್ತು. ಈ ದಾವೆಯನ್ನು ಹಾಕುವಾಗ ಪಹಣಿ ಪತ್ರಿಕೆಯು 4 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ನಿಪಿ-1 ರ ಪ್ರಕಾರ ದಾವಾ ಆಸ್ತಿಯ ಮೂಲ ಸ.ನಂಬ್ರ 5/3 ಆಗಿತ್ತು ಎಂದರೆ ಸರಿ . 2017 ರಲ್ಲಿ ದಾವಾ ಸ್ಥಿರಾಸ್ತಿಯ ಸ.ನಂಬ್ರ 5/8 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ರ ಪ್ರಕಾರ ದಾವಾ ಆಸ್ತಿಯ ಸ.ನಂಬ್ರ 5/8 ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಹಾಕುವಾಗ ಆ ಸಮಯದ ಪಹಣಿ ಪತ್ರಿಕೆಯನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ನ್ಯಾಯಾಲಯದಲ್ಲಿ ದಿ: 06-12-2012 ರ ಪಹಣಿ ಪತ್ರಿಕೆಯನ್ನು ಏಕೆ ಹಾಜರು ಪಡಿಸಿದ್ದೇನೆಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಹಾಕುವಾಗ ದಾವಾ ಆಸ್ತಿಯ ಸ.ನಂಬ್ರ 5/8 ಇತ್ತು ಎಂದರೆ ಸರಿ . ಈ ದಾವೆಯಲ್ಲಿ ಸ.ನಂ 5/8 ಎಂದು ತೋರಿಸುವ ಬದಲು ಸ.ನಂ 5/3 ಪಿ3 ಎಂದು ಏಕೆ ಹಾಕಲಾಗಿದೆ ಎಂದು ನನಗೆ ಗೊತ್ತಿಲ್ಲ.

ಈ ದಾವೆಯಲ್ಲಿ 4 ನೇ ಪ್ರತಿವಾದಿ ತನ್ನ ಉದಾಹರಣೆಯಲ್ಲಿ ಏನು ಹೇಳುತ್ತಿದ್ದಾಳೆ ಎಂದು ನನಗೆ ಗೊತ್ತಿಲ್ಲ. ಮಾನ್ಯ ನ್ಯಾಯಾಲಯದಲ್ಲಿ 4 ನೇ ಪ್ರತಿವಾದಿಯ ವಿರುದ್ಧ ಪ್ರತಿಬಂಧಕಾಜ್ಞೆಯನ್ನು ಪಡೆಯಲು ಹಳೆಯ ಪಹಣಿ ಪತ್ರಿಕೆಯನ್ನು ಮತ್ತು ಹಳೆಯ ಸ.ನಂಬ್ರವನ್ನು ಕಾಣಿಸಿರುತ್ತೇನೆಂದರೆ ನಾನು ಹೊಸದನ್ನು ನೀಡಿರುತ್ತೇನೆ. ಈ ದಾವೆಯನ್ನು ನಾನು, 1 ರಿಂದ 3 ಮತ್ತು 5 ನೇ ಪ್ರತಿವಾದಿ ಸೇರಿ 4 ನೇ ಪ್ರತಿವಾದಿಯ ವಿರುದ್ಧ ಮಾಡಿರುತ್ತೇವೆ. ನನ್ನ ತಾಯಿ 2000 ನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಾಯಿ ತೀರಿಕೊಂಡ ನಂತರ ದಾವಾ ಆಸ್ತಿಯ ಪಹಣಿ ಪತ್ರಿಕೆಯು ಯಾರ ಹೆಸರಲ್ಲಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-2 ರ ಪಹಣಿ ಪತ್ರಿಕೆಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಈ ದಾವೆಯನ್ನು ದಾಖಲಿಸುವಾಗ ನಾನು ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ವಕೀಲರಿಗೆ ಕೊಟ್ಟಿರುತ್ತೇನೆ. ಈ ವ್ಯಾಜ್ಯ ದಾಖಲು ಮಾಡುವಾಗ ದಾವಾ ಆಸ್ತಿಯ ಪಹಣಿ ಪತ್ರಿಕೆ 4 ನೇ ಪ್ರತಿವಾದಿಯ ಹೆಸರಲ್ಲಿತ್ತು. 4 ನೇ ಪ್ರತಿವಾದಿಯ ಹೆಸರಲ್ಲಿ ದಾವಾ ಆಸ್ತಿಯ ಪಹಣಿ ಪತ್ರಿಕೆಯು 2012 ರಲ್ಲಿ ಬದಲಾವಣೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಯಾವ ಆಧಾರದ ಮೇರೆಗೆ ದಾವಾ ಆಸ್ತಿಯ ಪಹಣಿ ಪತ್ರಿಕೆಯು 4 ನೇ ಪ್ರತಿವಾದಿಯ ಹೆಸರಲ್ಲಿ ಬದಲಾವಣೆ ಆಗಿದೆ ಎಂದರೆ ವ್ಯಾಜ್ಯ ಹಾಕುವುದಕ್ಕೆ ಮುಂಚೆ 4 ನೇ ಪ್ರತಿವಾದಿ ಡಿ.ಸಿ.ಯವರ ಬಳಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಅರ್ಜಿ ಹಾಕಿದ್ದು ಆವಾಗ ನನಗೆ ಗೊತ್ತಾಗಿರುತ್ತದೆ. ಸದ್ರಿ ಅರ್ಜಿಯನ್ನು ದಾವೆ ಹಾಕುವ 2 ತಿಂಗಳ ಮುಂಚೆ ಅಳತೆ ಮಾಡುವ ಕುರಿತು ಹಾಕಲಾಗಿತ್ತು.

(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)

**ಓ.ಹೇ.ಕೇ.ಸ.ಇದೆ** **ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ**